# ಈಜುಕೊಳದ ರಾಜ ರ‍್ಯಾನ್ ಲೋಶೆ

ಅಮೆರಿಕದ ಈಜು ತಾರೆ ರ‍್ಯಾನ್ ಲೋಶೆ ಅವರು ಶಾಂಘೈನ ಓರಿಯಂಟಲ್ ಸ್ಪೋರ್ಟ್ಸ್ ಸೆಂಟರ್ ಈಜುಕೊಳದಲ್ಲಿ ಕಳೆದ ವಾರ ಹೊಸ ಅಲೆಯನ್ನೇ ಎಬ್ಬಿಸಿದರು.

■ ಮಹಮ್ಮದ್ ನೂಮಾನ್



**ಮೈ**ಕಲ್ ಫೆಲ್ಪ್ಸ್ ಬಳಿಕ ಅಮೆರಿಕವು ಮತ್ತೊಬ್ಬ ಈಜು ತಾರೆಯನ್ನು ಜಗತ್ತಿಗೆ ಪರಿಚಯಿಸಿದೆ. ಚೀನಾದ ಶಾಂಘೈನಲ್ಲಿ ನಡೆದ ಫಿನಾ ವಿಶ್ವ ಈಜು ಚಾಂಪಿಯನ್‌ಷಿಪ್‌ನ ಪುರುಷರ 200 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದ ರ‍್ಯಾನ್ ಲೋಶೆ ಹಲವರ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿದ್ದಾರೆ.

'ಚಿನ್ನದ ಮೀನು' ಎಂದೇ ಖ್ಯಾತಿ ಪಡೆದಿರುವ ಒಲಿಂಪಿಕ್ ಚಾಂಪಿಯನ್ ಫೆಲ್ಪ್ಸ್ ಅವರನ್ನು ಹಿಂದಿಕ್ಕಿದ ರ‍್ಯಾನ್ ಈಜಿನಲ್ಲಿ ಹೊಸ ಶಕೆಗೆ ನಾಂದಿ ಹಾಡಿದ್ದಾರೆ. ಈಜುಕೊಳದಲ್ಲಿ ದಾಖಲೆಗಳು ಆಗಿಂದಾಗ್ಗೆ ಮುರಿಯುವುದು ಸಹಜ. ಹೀಗಿರುವಾಗ ರ‍್ಯಾನ್ ಮಾಡಿದ ದಾಖಲೆಗೆ ಇಷ್ಟು ಮಹತ್ವ ಏಕೆ ಎಂಬ ಪ್ರಶ್ನೆ ಏಳುತ್ತದೆ.

ನೀರಿಗೆ ಧುಮುಕಿದ ತಕ್ಷಣ ಮಿಂಚಿನಂತೆ ಮುನ್ನುಗ್ಗಿದ ರ‍್ಯಾನ್ ಒಂದು ನಿಮಿಷ 54.00 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ್ದರು. ಹಳೆಯ ವಿಶ್ವದಾಖಲೆಯನ್ನು 0.10 ಸೆಕೆಂಡ್‌ಗಳಿಂದ ಉತ್ತಮಪಡಿಸಿದ್ದರು. ಫೆಲ್ಪ್ಸ್ ಬೆಳ್ಳಿ ಪದಕಕ್ಕೆ ತೃಪ್ತಿಪಡಬೇಕಾಗಿ ಬಂದಿತ್ತು.

2010ರ ಜನವರಿ ತಿಂಗಳಲ್ಲಿ ಅಂತರರಾಷ್ಟ್ರೀಯ ಈಜು ಸಂಸ್ಥೆ (ಫಿನಾ) ಪಾಲಿಯುರೆಥೇನ್ ಈಜುಡುಗೆಯನ್ನು ನಿಷೇಧಿಸಿತ್ತು. ಆ ಬಳಿಕ ಮೂಡಿಬಂದ ಮೊದಲ ಲಾಂಗ್ ಕೋರ್ಸ್ ವಿಶ್ವದಾಖಲೆ ಇದು. ಈ ಕಾರಣ ಲೋಶೆ ಮಾಡಿದ ದಾಖಲೆಗೆ ಹೆಚ್ಚಿನ ಮಹತ್ವ ಲಭಿಸಿದೆ. ಅವರ ಸಾಧನೆ ಎಲ್ಲರ ಕುತೂಹಲಕ್ಕೆ ಕಾರಣವಾಗಿದೆ.

ಪಾಲಿಯುರೆಥೇನ್ ಈಜುಡುಗೆ ಕಾಲು ಒಳಗೊಂಡಂತೆ ಸ್ಪರ್ಧಿಯ ದೇಹದ ಹೆಚ್ಚಿನ ಭಾಗವನ್ನು ಮುಚ್ಚುತ್ತಿತ್ತು. ಇದರಿಂದ ವೇಗವಾಗಿ ಈಜಲು ಸಾಧ್ಯವಾಗುತ್ತಿತ್ತು. ಇದೇ ಕಾರಣ 2009ರಲ್ಲಿ ರೋಮ್‌ನಲ್ಲಿ ನಡೆದ ವಿಶ್ವಚಾಂಪಿಯನ್‌ಷಿಪ್‌ನಲ್ಲಿ 43 ದಾಖಲೆಗಳು ಮೂಡಿಬಂದಿದ್ದವು! ಇದು ವಿವಾದಕ್ಕೂ ಎಡೆಮಾಡಿಕೊಟ್ಟಿತ್ತು. ವಿವಿಧ ಕಡೆಗಳಿಂದ ಒತ್ತಡ ಬಂದ ಬಳಿಕ ಅಂತರರಾಷ್ಟ್ರೀಯ ಈಜು ಸಂಸ್ಥೆ ಇಂತಹ ಈಜುಡುಗೆಯನ್ನು ನಿಷೇಧಿಸಿತ್ತು. 'ಹೈಟೆಕ್' ಈಜುಡುಗೆ ಎರಡು ವರ್ಷಗಳ ಕಾಲ ಚಾಲ್ತಿಯಲ್ಲಿತ್ತು. ಈ ಹಂತದಲ್ಲಿ ವಿವಿಧ ಸ್ಪರ್ಧಿಗಳು ಒಟ್ಟು 200 ಕ್ಕೂ ಅಧಿಕ ದಾಖಲೆ ಸ್ಥಾಪಿಸಿದ್ದರು. ಆದರೆ ನಿಷೇಧದ ಬಳಿಕ ವಿಶ್ವದಾಖಲೆ ಅಪರೂಪ ಎನಿಸಿತ್ತು. 19 ತಿಂಗಳುಗಳ ಅವಧಿಯಲ್ಲಿ ಲಾಂಗ್ ಕೋರ್ಸ್‌ನಲ್ಲಿ ಯಾವುದೇ ದಾಖಲೆ ಕಂಡುಬರಲಿಲ್ಲ. ಇದೀಗ 26ರ ಹರೆಯದ ಲೋಶೆ ಹೊಸ ಸಾಧನೆಗೆ ಕಾರಣರಾಗಿದ್ದಾರೆ.

'ಹೈಟೆಕ್ ಈಜುಡುಗೆ ನಿಷೇಧಿಸಿದ ಬಳಿಕ ವಿಶ್ವದಾಖಲೆ ಅಸಾಧ್ಯ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಅದು ಸಾಧ್ಯ ಎಂಬುದನ್ನು ಎಲ್ಲರಿಗೂ ತೋರಿಸಿಕೊಟ್ಟಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ದಾಖಲೆಗಳಿಗೆ ಇದು ಹಾದಿಯೊದಗಿಸಬಹುದು' ಎಂದು ಲೋಶೆ ನುಡಿದಿದ್ದಾರೆ.

